**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 11 ಪ್ರಾ.ಸಾ. : 5**

ಸಾಕ್ಷಿಯ ಹೆಸರು : ಬಿ.ಗುರುಪ್ರಸಾದ

ತಂದೆಯ ಹೆಸರು : ಬಿ.ಕೆ. ಬಸಪ್ಪ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಕಾರ್ಯದರ್ಶಿ , ಲೋಕೋಪಯೋಗಿ ಇಲಾಖೆ , ಕರ್ನಾಟಕ ಸರ್ಕಾರ

ವಾಸ : ಬೆಂಗಳೂರು

**ದಿನಾಂಕಃ 17-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಶಿರಸಿ ವಿಭಾಗದಲ್ಲಿ ಮೇ 1999 ರಿಂದ ಜುಲೈ 2003 ರವರೆಗೆ ಪಂಚಾಯತ್ ರಾಜ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಾರ್ಯ ನಿರ್ವಾಹಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸಿದ್ದಾಪುರ ತಾಲೂಕು ಕಾನಗೋಡು ಗ್ರಾಮ ಪಂಚಾಯತಿ ನನ್ನ ವ್ಯಾಪ್ತಿಯಲ್ಲಿ ಬರುತ್ತಿತ್ತು . ಸ್ವಚ್ಛ ಗ್ರಾಮ ಯೋಜನೆ ಬಗ್ಗೆ ನನಗೆ ಮಾಹಿತಿ ಇದೆ . ನನ್ನ ಕಾರ್ಯಾವಧಿಯಲ್ಲಿ ಸ್ವಚ್ಛ ಗ್ರಾಮ ಯೋಜನೆ ಕಾನಗೋಡು ಗ್ರಾಮ ಪಂಚಾಯತಿಗೆ ಮಂಜೂರು ಆಗಿತ್ತು . ಅದರ ಅಂದಾಜು ವೆಚ್ಚ ರೂ. 20,00,000/- ಆಗಿತ್ತು. ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ 5 ಭಾಗಗಳು ಇರುತ್ತವೆ . ಒಂದು ಹಳ್ಳಿಯಲ್ಲಿ ರಸ್ತೆ ನಿರ್ಮಾಣ ಮಾಡುವುದು , 2 ನೇಯದು ಚರಂಡಿ ನಿರ್ಮಾಣ ಮಾಡುವುದು , 3 ನೇಯದು ಸಾಮೂಹಿಕ ಶೌಚಾಲಯವನ್ನು ಶಾಲೆ ಮತ್ತು ಸಾರ್ವಜನಿಕರಿಗೆ ನಿರ್ಮಾಣ ಮಾಡುವುದು, 4 ನೇಯದು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸುವುದು ಮತ್ತು 5 ನೇಯದು ಅಸ್ತ್ರ ಒಲೆಗಳನ್ನು ಮನೆ ಮನೆಗಳಿಗೆ ನಿರ್ಮಿಸಿ ಕೊಡುವುದು ಆಗಿರುತ್ತದೆ . ಮೇಲ್ಕಂಡ ಕಾಮಗಾರಿಗಳ ಪೈಕಿ ಮೊದಲಿನ ಮೂರು ಕಾಮಗಾರಿಗಳು ನಮ್ಮ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಉಪ ವಿಭಾಗದ ಮೂಲಕ ಅನುಷ್ಠಾನ ಆಗುತ್ತಿತ್ತು . ಸಿದ್ದಾಪುರ ಉಪ ವಿಭಾಗ ಆಗಿತ್ತು. ಬಾಕಿ ಎರಡು ಕಾಮಗಾರಿ / ಯೋಜನೆಯನ್ನು ಗ್ರಾಮ ಪಂಚಾಯತಿಯವರು ಸ್ಥಳೀಯ ಮಟ್ಟದಲ್ಲಿ ಅನುಷ್ಠಾನ ಮಾಡುತ್ತಿದ್ದರು . ಕಾನಗೋಡು ಗ್ರಾಮ ಪಂಚಾಯತಿಯಲ್ಲಿ

ಕೊನೆಯ ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ ಮಂಜೂರಾಗಿದ್ದ ರೂ. 20,00,000/- ಅಂದಾಜು ವೆಚ್ಚದ ಕಾಮಗಾರಿಗಳಿಗೆ ನನ್ನ ಕಚೇರಿಯಿಂದ ತಾಂತ್ರಿಕ ಪರಿಶೀಲನೆ ಮಾಡಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಬೇಕಾಗಿತ್ತು . ಗ್ರಾಮ ಪಂಚಾಯತಿಯವರು ಮತ್ತು ನಮ್ಮ ಇಲಾಖೆಯ ಸ್ಥಳೀಯ ಕಚೇರಿಯವರು ಮೇಲ್ಕಂಡ ಐದು ರೀತಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟುಗೂಡಿಸಿ ಪ್ರಗತಿ ವರದಿಯನ್ನು ನನ್ನ ಕಚೇರಿಗೆ ಸಲ್ಲಿಸುತ್ತಿದ್ದರು . ಆ ಎಲ್ಲಾ ಕ್ರೋಢಿಕರಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಭೂಸೇನೆಯ ಉಪ ನಿರ್ದೇಶಕರು ನೊಡಲ್ ಆಫೀಸರ್ ಆಗಿದ್ದರು. ಅವರಿಗೆ ಸಹ ಪ್ರಗತಿ ವರದಿಯನ್ನು ಕಳುಹಿಸುತ್ತಿದ್ದರು .

2. ಕಾನಗೋಡು ಗ್ರಾಮ ಪಂಚಾಯತಿಯಲ್ಲಿ ಅಂದಾಜು ಪಟ್ಟಿಯಲ್ಲಿದ್ದ ಪ್ರಕಾರ 210 ಜನರಿಗೆ ಆ ಗ್ರಾಮ ಪಂಚಾಯತಿಯಿಂದ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಬೇಕಿತ್ತು. 1999 ರಿಂದ 2003 ರವರೆಗೆ ನಾನು ನನ್ನ ಕಚೇರಿಯಿಂದ ಮೇಲ್ಕಂಡ ಕಾನಗೋಡು ಗ್ರಾಮ ಪಂಚಾಯತಿಯ ಎಲ್ಲಾ ಐದು ಯೋಜನೆಗಳಿಗೆ ಸಂಬಂಧಪಟ್ಟಂತೆ ಪ್ರಗತಿ ವರದಿ ಪರಿಶೀಲಿಸಿ ಕ್ರೋಢಿಕರಿಸಿ ನಾನು ಜಿಲ್ಲಾ ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಮತ್ತು ನೊಡಲ್ ಅಧಿಕಾರಿಯವರಿಗೆ ಕಳುಹಿಸಿರುವ ದಾಖಲಾತಿಯನ್ನು ನೋಡಿದರೆ ಗುರುತಿಸುತ್ತೇನೆ. 2005 ರಲ್ಲಿ ಮೈಸೂರಿನ ನಗರ ಸಭೆಯಲ್ಲಿ ಅಧೀಕ್ಷಕ ಅಭಿಯಂತರನಾಗಿ ಕೆಲಸ ಮಾಡುತ್ತಿದ್ದೆ. ನನಗೆ ಲೋಕಾಯುಕ್ತ ಕಚೇರಿಯಿಂದ ನಾನು 2005 ರಲ್ಲಿ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುವಾಗ ಕಾನಗೋಡು ಗ್ರಾಮ ಪಂಚಾಯತಿಯಲ್ಲಿ ಆದ ಎಲ್ಲಾ ಯೋಜನೆಗಳಿಗೆ ಸಂಬಂಧಪಟ್ಟ ವರದಿ ಬಗ್ಗೆ ನನ್ನನ್ನು ವಿಚಾರಣೆ ಮಾಡಿದರು . ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ನನ್ನಿಂದ ಮಾಹಿತಿ ಕೇಳಿ ತಿಳಿದುಕೊಂಡಿದ್ದರು . ನಾನು ಈಗ ಮೇಲೆ ಹೇಳಿದ ದಾಖಲಾತಿಗಳನ್ನು ನೋಡಿರುತ್ತೇನೆ. ನಿ.ಪಿ. 24 ಈಗ ನೋಡಿದ್ದು ಅದು ನಾನು ಸಿದ್ದಾಪುರ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರ ಆಗಿದೆ . ಅದರಲ್ಲಿರುವ ರುಜು ನನ್ನದಾಗಿದೆ . ಸಾಕ್ಷಿಯ ರುಜುವನ್ನು ನಿ.ಪಿ. 24(ಎ) ಎಂದು ಗುರುತಿಸಲಾಯಿತು. ಈಗ ನೋಡಿದ ಪ್ರಮಾಣ ಪತ್ರ , ಘೋಷಾವಾರೆ , ಅಂದಾಜು ಪತ್ರಿಕೆ ತಯಾರಿಸುವಾಗ ಸಂಗ್ರಹಿಸಿದ ಮಾಹಿತಿ , ಅಂದಾಜು ಪತ್ರಿಕೆಗೆ ಅನುಗುಣವಾಗಿ ನೀಡಿರುವ ಆಡಳಿತಾತ್ಮಕ ಮಂಜೂರಿ , ಸದರಿ ಕಾನಗೋಡು ಗ್ರಾಮ ಪಂಚಾಯತಿಯ ಸ್ವಚ್ಛ ಗ್ರಾಮ

ಯೋಜನೆ ಕಾಮಗಾರಿಗಳ ಅಂದಾಜು ಪತ್ರಿಕೆ ಫೋಷಾವಾರು , ನಾನು ಪರಿಶೀಲಿಸಿದ ಅಂದಾಜು ಪತ್ರಿಕೆಯ ದಾಖಲಾತಿಗಳು ಆಗಿರುತ್ತವೆ . ಅವುಗಳನ್ನು ಒಟ್ಟಾರೆಯಾಗಿ ನಿ.ಪಿ. 46 ಎಂದು ಗುರುತಿಸಲಾಯಿತು. ಅದು 6 ಹಾಳೆ ಇವೆ . ಅವು ದೃಢೀಕೃತ ನಕಲುಗಳಾಗಿವೆ . ಅವುಗಳನ್ನು ಪ್ರತ್ಯೇಕವಾಗಿ ನಿ.ಪಿ. 46/1 ರಿಂದ 6 ಎಂದು ಗುರುತಿಸಲಾಯಿತು. ಅದರ ಪೈಕಿ ನಿ.ಪಿ. 46/6 ರಲ್ಲಿ ನನ್ನ ರುಜು ಇದೆ . ನಾನು ಆ ದಾಖಲಾತಿಗಳ ತಾಂತ್ರಿಕ ಪರಿಶೀಲನೆ ಮಾಡಿದ್ದೇನೆ. ಈ ಎಲ್ಲಾ ಕಾಮಗಾರಿಗಳನ್ನು ಸರ್ಕಾರದ ಮಾರ್ಗಸೂಚಿ ಪ್ರಕಾರ ಅನುಷ್ಠಾನ ಮಾಡುವಂತೆ ಪತ್ರ ಬರೆದು ನಮ್ಮ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಮತ್ತು ಕಾನಗೋಡು ಗ್ರಾಮ ಪಂಚಾಯತಿರವರಿಗೆ ತಿಳಿಸಿದ್ದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

3. ನಾನು ತಾಂತ್ರಿಕ ಪರಿಶೀಲನೆ ಮಾಡಿದ ಬಗ್ಗೆ ನಿ.ಪಿ. 46/6 ರಲ್ಲಿ ಹಿಂಬರಹ ಬರೆದು ರುಜು ಮಾಡಿದ್ದೇನೆ. ಆ ಬಗ್ಗೆ ಪ್ರತ್ಯೇಕ ಪ್ರಮಾಣ ಪತ್ರವನ್ನು ನಾನು ನೀಡಿಲ್ಲ. ಲೋಕಾಯುಕ್ತ ಅಧಿಕಾರಿಯವರು ನನ್ನನ್ನು ದೂರವಾಣಿ ಮೂಲಕ ವಿಚಾರಣೆ ಮಾಡಿದರು ಹಾಗೂ ಮಾಹಿತಿ ಪಡೆದರು. ನಿ.ಪಿ. 46/1 ರಿಂದ 6 ರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ ಆದರೆ ಅನುಮೋದನೆ ನೀಡಿದ ನಂತರ ಶೌಚಾಲಯದ ಬಗ್ಗೆ ಏನು ಆಯಿತು ಎಂದು ನನಗೆ ಮಾಹಿತಿ ಇಲ್ಲ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸ್ಥಳೀಯ ಕಚೇರಿ ಸಿದ್ದಾಪುರದಲ್ಲಿ ಇದೆ . ಅಲ್ಲಿ ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇರುತ್ತಾರೆ. ನಿ.ಪಿ. 24 ಹಾಗೂ ನಿ.ಪಿ. 46/1 ರಿಂದ 6 ದಾಖಲಾತಿಗಳಿಗೂ ಹಾಗೂ ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ